# ರಾಷ್ಟ್ರೀಯ ಆರೋಗ್ಯ ಅಭಿಯಾನ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆನಂದರಾವ್ ವೃತ್ತ, ಬೆಂಗಳೂರು,

ಸಂಖ್ಯೆ: ಪೌಆಕಾ/ ಎನ್ಆರ್‌ಸಿ/09/2016-17 ದಿನಾಂಕ:19-07-2016

**ಪೌಷ್ಠಿಕ ಆಹಾರ ವಿಭಾಗದಿಂದ ಪೌಷ್ಠಿಕ ಆಹಾರ ಪುನಶ್ಚೇತನ ಕೇಂದ್ರಗಳು ಕಾರ್ಯನಿರ್ವಹಿಸಲು ಮಾರ್ಗಸೂಚಿ**

## (Guidelines for Functioning of Nutritional Rehabilitation Centers)

**ಪೀಠಿಕೆ:**

ಡಿಡಿ (ಸಿಹೆಚ್) 21/2010-11 ದಿನಾಂಕ : 21-3-2012ರ ಅಧಿಕೃತಜ್ಞಾಪನಾ ಪತ್ರದಲ್ಲಿ ತಿಳಿಸಿರುವಂತೆ ದಿನಾಂಕ: 7-3-2012ರ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದಂತೆ Nutrition Rehabilitation Center (NRC) ಹಾಗೂ Modified Nutrition Rehabilitation Center (MNRC) ಗಳ ನಾಮಶೀರ್ಷಿಕೆಯನ್ನು ಕ್ರಮವಾಗಿ ಮಕ್ಕಳ ಆರೋಗ್ಯ ಪುನಶ್ಚೇತನಕೇಂದ್ರ ಹಾಗೂ ಪರಿವರ್ತಿತ ಮಕ್ಕಳ ಆರೋಗ್ಯ ಪುನಶ್ಚೇತನಕೇಂದ್ರವೆಂದು ಬದಲಿಸಲಾಗಿದೆ.

5 ವರ್ಷದೊಳಗಿನ ಮಕ್ಕಳ ಮರಣಗಳಲ್ಲಿ ಮೂರನೇ ಒಂದು ಭಾಗದಿಂದ ಅರ್ಧ ಭಾಗದಷ್ಟು ಮರಣಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಪೌಷ್ಠಿಕತೆಯು ಕಾರಣವಾಗಿರುತ್ತದೆ. ಎತ್ತರಕ್ಕನುಗುಣವಾಗಿ ಅತಿ ಕಡಿಮೆ ತೂಕ ಹೊಂದಿರುವ ಮಕ್ಕಳನ್ನು SAM ಮಕ್ಕಳು ಎಂದು ಕರೆಯಲಾಗುತ್ತದೆ.

ಮಕ್ಕಳಲ್ಲಿ ಅಪೌಷ್ಠಕತೆಯ ಬಗ್ಗೆ ಎನ್.ಎಫ್.ಹೆಚ್.ಎಸ್-3ರ ಸಮೀಕ್ಷೆಯ ಅಂಕಿಅಂಶಗಳು (ಶೇಖಡವಾರು) ಕೆಳಕಂಡಂತಿದೆ.

| ಹುಟ್ಟಿನಿಂದ 3 ವರ್ಷದ ಮಕ್ಕಳಲ್ಲಿ | ಭಾರತ | | | ಕರ್ನಾಟಕ | | |
|---|---|---|---|---|---|---|
| | ಒಟ್ಟು | ನಗರ | ಗ್ರಾಮಾಂತರ | ಒಟ್ಟು | ನಗರ | ಗ್ರಾಮಾಂತರ |
| ವಯಸ್ಸಿಗೆ ಕಡಿಮೆ ತೂಕ ಹೊಂದಿರುವ ಮಕ್ಕಳು | 40.4 | 30.1 | 43.7 | 33.3 | 26.4 | 37 |
| ವಯಸ್ಸಿಗೆ ಕಡಿಮೆ ಎತ್ತರ ಹೊಂದಿರುವ ಮಕ್ಕಳು | 44.9 | 37.4 | 47.2 | 42.4 | 33.9 | 47 |
| ಎತ್ತರ ಕಡಿಮೆ ತೂಕ ಹೊಂದಿರುವ ಮಕ್ಕಳು | 22.9 | 19.0 | 24.1 | 18.9 | 17.0 | 19.9 |
| ರಕ್ತಹೀನತೆ ಹೊಂದಿರುವ ಮಕ್ಕಳು | 78.9 | 72.2 | 80.9 | 83.9 | 81.6 | 85.3 |

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಭಾರತ ಸರ್ಕಾರವು 2010-11ನೇ ಸಾಲಿನಿಂದ SAM ಮಕ್ಕಳನ್ನು ತಾಯಿಯೊಂದಿಗೆ ಆಸ್ಪತ್ರೆಗಳಲ್ಲಿ ದಾಖಲಿಸಿ ಚಿಕಿತ್ಸೆ ನೀಡಿ, ಪುನಶ್ಚೇತನ ನೀಡಲು ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರ (ಎನ್.ಆರ್.ಸಿ) ಗಳನ್ನು ಪ್ರಾರಂಭಿಸಿದೆ. ಅಂತೆಯೇ ಕರ್ನಾಟಕ ಸರ್ಕಾರವು 2010-11ನೇ ಸಾಲಿನಲ್ಲಿ ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲಾ ಆಸ್ಪತ್ರೆಗಳಲ್ಲಿ ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರ (ಎನ್.ಆರ್.ಸಿ) ಗಳನ್ನು ಪ್ರಾರಂಭಿಸಿದೆ. 2011-12ನೇ ಸಾಲಿನಲ್ಲಿ ರಾಯಚೂರು ಜಿಲ್ಲಾಸ್ಪತ್ರೆಯಲ್ಲಿ ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರ (ಎನ್.ಆರ್.ಸಿ)ವನ್ನು ಸ್ಥಾಪಿಸಲಾಗಿದೆ.

ಮಾನ್ಯ ಜೆಸ್ಟಿಸ್ ಎನ್.ಕೆ. ಪಾಟೀಲ್ ರವರ ವರದಿಯ ಶಿಫಾರಸ್ಸಿನಂತೆ 2012-13ನೇ ಸಾಲಿನಲ್ಲಿ 18 ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರಗಳನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ರಾಜ್ಯ ಸರ್ಕಾರದ ಅನುದಾನದಿಂದ ಪ್ರಾರಂಭ ಮಾಡಲಾಗಿರುತ್ತದೆ.

ಪ್ರಸಕ್ತ 2016-17ನೇ ಸಾಲಿನಲ್ಲಿ ಚಿತ್ರದುರ್ಗ, ದಾವಣಗೆರೆ, ಕೋಲಾರ, ಚಾಮರಾಜನಗರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಚಿಕ್ಕಮಗಳೂರು, ವೆನ್‌ಲಾಕ್ ಮಂಗಳೂರು, ಕೊಡಗು, ಉಡುಪಿ, ಬಾಗಲಕೋಟೆ, ಬಿಜಾಪುರ, ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ, ಗುಲ್ಬರ್ಗಾ, ಕೊಪ್ಪಳ, ಯಾದಗಿರಿ ಜಿಲ್ಲಾ ಆಸ್ಪತ್ರೆಗಳು ಹಾಗೂ ರಾಜ್ಯದ 12 ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅನುದಾನದಿಂದ ಪ್ರಾರಂಭ ಮಾಡಲಾಗಿರುತ್ತದೆ.

ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರಗಳ ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.

ಡಿಡಿ(ಸಿಹೆಚ್) 11/2013-14 ದಿನಾಂಕ 01-07-2013ರಲ್ಲಿ ಹಾಗೂ 30-042012 ನೀಡಿರುವ ಮಾರ್ಗಸೂಚಿಗಳಿಗೆ ಪೂರಕವಾಗಿ ಎನ್.ಆರ್.ಸಿ ಕಾರ್ಯಗತ ಮಾಡುವ ಬಗ್ಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗುತ್ತಿದೆ.

**ಎನ್.ಆರ್.ಸಿಗಳಲ್ಲಿರಬೇಕಾದ ಸೌಲಭ್ಯಗಳು**

ಎನ್.ಆರ್.ಸಿ-20 ಚ.ಅ.ವಿಸ್ತೀರ್ಣದ ಕೊಠಡಿಯಲ್ಲಿ 10 ಹಾಸಿಗಗಳನ್ನು ಹಾಗೂ ಮಕ್ಕಳ ಆಟಿಕೆಗಳನ್ನು ಇರಿಸಿ ಪ್ರತ್ಯೇಕ ಮಕ್ಕಳ ಪುನಶ್ಚೇತನವಾರ್ಡ್ ಸ್ಥಾಪಿಸುವುದು. ಸ್ಥಳಾವಕಾಶವಿಲ್ಲದಿದ್ದಲ್ಲಿ ಮಕ್ಕಳ ವಾರ್ಡ್‌ನಲ್ಲಿಯೇ ಪಾರ್ಟಿಷನ್ ಮಾಡಿ ಸ್ಥಾಪಿಸುವುದು.

**ಎನ್.ಆರ್.ಸಿ. ಸಿಬ್ಬಂದಿ ವರ್ಗದ ವಿವರ**

1. ಆಸ್ಪತ್ರೆಯ ಮಕ್ಕಳ ತಜ್ಞರು ಉಸ್ತುವಾರಿ ನೋಡಿಕೊಳ್ಳತಕ್ಕದ್ದು. ಮಕ್ಕಳ ತಜ್ಞರಿಲ್ಲದಿದ್ದಲ್ಲಿ ಆಸ್ಪತ್ರೆಯ ಆಡಳಿತಾಧಿಕಾರಿಗಳು ಉಸ್ತುವಾರಿ ನೋಡಿಕೊಳ್ಳತಕ್ಕದ್ದು.
2. ಪ್ರತಿ ಎನ್.ಆರ್.ಸಿ. ಯಲ್ಲಿ ಒಬ್ಬ ಎಂ.ಬಿ.ಬಿ.ಎಸ್ ಪದವೀಧರ ವೈದ್ಯರು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವುದು.
3. ಪ್ರತಿ ಎನ್.ಆರ್.ಸಿ. ಯಲ್ಲಿ 4 ಶುಶ್ರೂಷಕಿಯರು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವುದು.
4. ಒಬ್ಬ ಬಿ.ಎಸ್ಸಿ./ಬಿ.ಎ ನ್ಯೂಟ್ರಿಷನ್ ಪದವಿ/ಗೃಹ ವಿಜ್ಞಾನ ಪದವಿ ಹೊಂದಿರುವವರು ಡಯಟ್‌ಕೌನ್ಸಿಲರ್ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವುದು. ಇವರಿಗೆ ರೂ. 10,951/- ಮಾಸಿಕ ಸಂಚಿತ ವೇತನ ನಿಗದಿ ಪಡಿಸಲಾಗಿದೆ.
5. ಒಬ್ಬ ಅಡಿಗೆಯವರು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವುದು. ಒಬ್ಬ ಅಟೆಂಡರ್‌ರವರು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವುದು.

**ಅರ್ಹ ಮಕ್ಕಳನ್ನು ಗುರುತಿಸುವ ವಿಧಾನ**

1. ಯಾವುದೇ ಕಾಯಿಲೆಗೆ ದಾಖಲಾಗುವ ಮಕ್ಕಳಲ್ಲಿ ಅಪೌಷ್ಟಿಕತೆಯ ಅಂಶಗಳು ಕಂಡು ಬಂದಲ್ಲಿ ಎನ್.ಆರ್.ಸಿ.ಗೆ ಆ ಮಕ್ಕಳನ್ನು ವರ್ಗಾಯಿಸುವುದು.
2. ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ಅಥವಾ ಲಸಿಕೆ ಹಾಕಿಸಿಕೊಳ್ಳಲು ಬಂದ ಮಕ್ಕಳಲ್ಲಿ ಅಪೌಷ್ಟಿಕತೆ ಗುರುತು ಇದ್ದಲ್ಲಿ ಅಂತಹ ಮಕ್ಕಳನ್ನು ಈ ಕೇಂದ್ರಕ್ಕೆ ದಾಖಲಿಸುವುದು.
3. ಅಂಗನವಾಡಿ ಕೇಂದ್ರದಿಂದ/ ಉಪಕೇಂದ್ರದಿಂದ / ಪ್ರಾಥಮಿಕ ಕೇಂದ್ರದಿಂದ ಗುರುತಿಸಲ್ಪಟ್ಟ ಅಪೌಷ್ಟಿಕ ಮಕ್ಕಳನ್ನು ದಾಖಲಿಸುವುದು.
4. ಗುರುತಿಸಿರುವ ಎನ್.ಆರ್.ಸಿ. / ಎಂ.ಎನ್.ಆರ್.ಸಿ. ಗಳಲ್ಲಿ ಮೂರು ತಿಂಗಳಿಗೊಮ್ಮೆ ಅಪೌಷ್ಟಿಕತೆ ಕ್ಯಾಂಪ್ ನಡೆಸುವುದು. ಅಂಗನವಾಡಿ ಕೇಂದ್ರಗಳಿಂದ ಹಾಗೂ ಉಪಕೇಂದ್ರಗಳಿಂದ ಮಕ್ಕಳನ್ನು ತಾಲ್ಲೂಕು

ಆಸ್ಪತ್ರೆಗಳಲ್ಲಿ ನಿರ್ದಿಷ್ಟ ದಿನದಂದು ಕರೆತಂದು ಮಕ್ಕಳ ತಜ್ಞರಿಂದ ತಪಾಸಣೆ ನಡೆಸುವುದು. ಅರ್ಹ ಮಕ್ಕಳನ್ನು ಕೇಂದ್ರಕ್ಕೆ ದಾಖಲಿಸುವುದು.

**ದಾಖಲಿಸಿದ ಮಕ್ಕಳ ಆರೈಕೆ:**

ಮಗುವಿಗೆ ಜ್ವರ, ವಾಂತಿ, ಭೇದಿ, ನಂಜು ಇದ್ದಲ್ಲಿ ಮೊದಲು ಈ ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆ ನೀಡುವುದು. ಮೊದಲ 3 ದಿವಸಗಳಲ್ಲಿ ಪ್ರಾರಂಭಿಕ ಆಹಾರ (F-75 Diet) ನೀಡುವುದು.

ಮಗು ಚೇತರಿಸಿದಂತೆ ಮುಂದಿನ ದಿನಗಳಲ್ಲಿ F-100 catch up ಆಹಾರವನ್ನು ನೀಡಿ, ಜೊತೆಗೆ ಕಬ್ಬಿಣಾಂಶ ಹಾಗೂ ವಿಟಮಿನ್-ಎ ನೀಡುವುದು.

ಮುಂದಿನ 8-10 ದಿವಸಗಳಲ್ಲಿ ಕ್ರಮೇಣವಾಗಿ ಆಹಾರದ ಪ್ರಮಾಣವನ್ನು ಹೆಚ್ಚಿಸಿಕೊಂಡು ಹೋಗಿ ಮಗುವನ್ನು ಆಟ ಹಾಗೂ ಇತರೇ ಚಟುವಟಿಕೆಗಳಲ್ಲಿ ತೊಡಗಿಸುವುದು. ತಾಯಿಗೆ ಪೌಷ್ಠಿಕ ಆಹಾರ ತಯಾರಿಸುವುದನ್ನು ತಿಳಿಸಿಕೊಡುವುದು.

ಮಗುವಿನ ತೂಕ ದಾಖಲಾದ ತೂಕಕ್ಕಿಂತ ಶೇ. 15ರಷ್ಟು ಹೆಚ್ಚಿದಾಗ ಹಾಗೂ ಸತತವಾಗಿ 3 ದಿನಗಳ ಕಾಲ ದಿನಕ್ಕೆ 5 ಗ್ರಾಂತೂಕ ಹೆಚ್ಚಿ ಮಗು ಮಾಮೂಲಿನಂತೆ ಊಟ ಮಾಡುತ್ತಿದ್ದಲ್ಲಿ ಮನೆಗೆ ಕಳುಹಿಸಬಹುದು. ಮನೆಯಲ್ಲಿ ತೆಗೆದುಕೊಳ್ಳಬೇಕಾದ ಮಾತ್ರೆ, ಟಾನಿಕ್, ವಿಟಮಿನ್‌ಗಳನ್ನು ತಾಯಿಗೆ ನೀಡಿ ಆಹಾರ ಹಾಗೂ ಔಷಧಿಗಳ ನೀಡುವಿಕೆ, ಆಸ್ಪತ್ರೆಗೆ ಮರು ಭೇಟಿ ಇವುಗಳ ಬಗ್ಗೆ ಮನವರಿಕೆ ಮಾಡುವುದು. ಮಗುವಿನ ವಸತಿಗೆ ಹತ್ತಿರದ ಎ.ಎನ್.ಎಮ್. ಆಶಾ & ಅಂಗನವಾಡಿ ಕಾರ್ಯಕರ್ತರಿಗೆ ಮಕ್ಕಳ ಮಾಹಿತಿ ತಿಳಿಸಿ ಮನೆ ಭೇಟಿ ನೀಡಲು ತಿಳಿಸುವುದು.

ಪ್ರಾಥಮಿಕ, ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುವ ತಿಂಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಎನ್‌ಆರ್‌ಸಿ ಮತ್ತು ಎಂಎನ್‌ಆರ್‌ಸಿ ಸೇವೆಗಳ ಬಗ್ಗೆ ಚರ್ಚೆಮಾಡುವುದು. ದಾಖಲಾತಿ ಮತ್ತು ಕೇಂದ್ರದಿಂದ ಬಿಡುಗಡೆ ಹೊಂದಿದ ಮಕ್ಕಳ ಅನುಸರಣೆಯ ಪರಿಶೀಲನೆ ಮಾಡುವುದು.

ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ ಸಭೆ, ಆಶಾ ಕಾರ್ಯಕರ್ತೆಯರ ಮಾಸಿಕ ಸಭೆ, ಅಂಗನವಾಡಿ ಕಾರ್ಯಕರ್ತೆಯರ ಸೆಕ್ಟರ್ ಸಭೆಗಳಲ್ಲಿ ಸದರಿ ಕಾರ್ಯಕ್ರಮದ ಪ್ರಗತಿ ಪರಿಶೀಲನೆಯನ್ನು ತಪ್ಪದೇ ಮಾಡುವುದು.

ಎನ್‌ಆರ್‌ಸಿ ಮತ್ತು ಎಂಎನ್‌ಆರ್‌ಸಿಗೆ ಮಕ್ಕಳನ್ನು ಶಿಫಾರಸ್ಸು ಮಾಡಿದ ಆಶಾಕಾರ್ಯಕರ್ತೆಯರಿಗೆ, ಆಶಾಕಾರ್ಯಕ್ರಮದಡಿಯಲ್ಲಿ ನಿಗದಿ ಪಡಿಸಿದ ಉತ್ತೇಜನ ಧನ ಪ್ರಕರಣ ಒಂದಕ್ಕೆ ರೂ. 150/-ರಂತೆ ವಿತರಿಸಲು ಕ್ರಮಕೈಗೊಳ್ಳುವುದು.

ಎನ್‌ಆರ್‌ಸಿ ಮತ್ತು ಎಂಎನ್‌ಆರ್‌ಸಿಗಳಲ್ಲಿ ನಡೆಸುವ ಕಾರ್ಯಚಟುವಟಿಕೆಗಳ ಬಗ್ಗೆ ಮಾಸಿಕ ವರದಿ ಹಾಗೂ ಎಸ್‌ಓಇ (Statement of Expenditure) ಯನ್ನು ನಿಗದಿತ ನಮೂನೆಯಲ್ಲಿ ಪ್ರತಿ ತಿಂಗಳ 10ನೇ ತಾರೀಖಿನ ಒಳಗೆ ನಿರ್ದೇಶನಾಲಯದ ಪೌಷ್ಠಿಕ ಆಹಾರ ವಿಭಾಗಕ್ಕೆ ರವಾನಿಸುವುದು (Email: ddnutkar@gmail.com. Phone: 080-22340225)

**ಎನ್.ಆರ್.ಸಿ. ಗೆ ಬಿಡುಗಡೆಯಾಗುವ ಅನುದಾನದ ಉಪಯೋಗ :**

ಎನ್‌ಆರ್‌ಸಿ ಮತ್ತು ಎಂಎನ್‌ಆರ್‌ಸಿಯಲ್ಲಿ ದಾಖಲಾಗುವ ಮಗುವಿಗೆ ಒಂದು ದಿವಸಕ್ಕೆ ಔಷಧೋಪಚಾರಕ್ಕೆ ರೂ. 125/-, ತಾಯಿಗೆ ರೂ. 125/- ಮತ್ತು ಮಗುವಿನ ಆಹಾರಕ್ಕೆ ರೂ. 125/- ನಿಗದಿ ಪಡಿಸಲಾಗಿದೆ. ಮಗುವಿನ ಜೊತೆ ಎನ್‌ಆರ್‌ಸಿ ಮತ್ತು ಎಂಎನ್‌ಆರ್‌ಸಿಗೆ ಬರುವ ಪೋಷಕರಲ್ಲಿ ತಾಯಿ, ತಂದೆ, ಅಜ್ಜಿ, ಚಿಕ್ಕಮ್ಮ ಅಥವಾ ಕುಟುಂಬದ ಯಾವುದೇ ಸದಸ್ಯರು ಸಹಾಯಕರಾಗಿ ಬೆಂಬಲಕ್ಕೆ ನಿಂತರೂ ಅವರಿಗೆ ರೂ. 174/- ದಿನಕ್ಕೆ ಪರಿಹಾರ ಭತ್ಯೆ

ನೀಡುವುದು. ಒಂದು ವೇಳೆ ಅವರು ಮಗುವಿನ ಜೊತೆ 14 ದಿನಗಳು ತಂಗದಿದ್ದರೂ ಕೂಡ, ಅವರು ಆಸ್ಪತ್ರೆಯಲ್ಲಿ ಇರುವಷ್ಟು ದಿನಕ್ಕೆ ಕಡ್ಡಾಯವಾಗಿ ಸದರಿ ಪರಿಹಾರ ಭತ್ಯೆಯನ್ನು ನೀಡಬೇಕು ಹಾಗೂ ಪೋಷಕರಿಗೆ (ಒಬ್ಬರಿಗೆ) ಆಸ್ಪತ್ರೆಯಲ್ಲಿ ತಂಗಲು ಅನುವು ಮಾಡಿಕೊಡುವುದು.

**ಸಿಬ್ಬಂದಿ ವೇತನ:**

ವೇತನ ಹಂಚಿಕೆ ಬಗ್ಗೆ ಮಕ್ಕಳ ಆರೋಗ್ಯ ವಿಭಾಗದಿಂದ ಕಳುಹಿಸಲಾದ ಮಾರ್ಗಸೂಚಿಯನ್ನು ಅನುಸರಿಸಬೇಕು.

**ಅನುಬಂಧ–2**

Equipments (Equipment that are not available in the hospital to be purchased from ARS amount of Taluka Hospital Rs. 5000/-)

Glucometer- (1)

Thermometers preferably low – reading) – (2)

Weighing scales (Digital) (1)

Infantometer (1)

Stadiometer (1)

Toys for structural play (Safe, Homemade toys can be used as well)

Reference height and weight charts

**KITCHEN EQUIPMENTS**

Cooking Gas

Dietary scales (to weigh to 5 gms)

Measuring jars

Electric Blender (or manual whisks)

Water Filter

Refrigerator

Utensils (large containers, cooking utensils, feeding cups, saucers, spoons, jugs etc.)

Consumables (to be met out of recurring cost)

Supply for making Starter and Catch up (F 100) Diet

Dried Skimmed Milk

Whole dried milk

Fresh whole milk

Puffed rice

Vegetable oil

Foods similar to those used in home(for teaching / use in transition to home foods)

ಅನುಬಂಧ-3

Job description of the various personnel working in the NRC/MNRC

Medical Officer: Pediatrician. If not available, any MBBS doctor of the hospital is to be placed in charge of the unit & trained in facility based management of SAM.

Medical Officer will be the overall in-charge of the unit. He is responsible for clinical management of children admitted in the NRC. The MO will attend to emergence calls as per the need.

**Nutrition Counselor: is the supervisor of the unit**

- Chart out specific therapeutic diet plan for each child as per the guidelines in consultation with the Medical Officer.
- S/he will make a social assessment of the family and the community in which the child lives.
- S/he will also be responsible for
- Monitoring the preparation and distribution of
- Feeds as per diet charts.
- Maintaining NRC records inregisters
- Preparing reports of the NRC and
- Diet and treatment sheets
- Nutrition counselor will assess the feeding problem in each child and give individual counseling to mothers.
- The nutrition counselor will give demonstration on making low cost nutritious energy dense culturally acceptable child foods.
- Provide group counseling to beneficiaries of NRC & the other post-natal mothers on various topics like nutrition and malnutrition, hygiene and sanitation, infant and young child feeding practices, immunization, family planning, structured play therapy for psychosocial stimulation to engage children in play therapy for at least 30 minutes each day.
- One day in a week, eg.Thursday, will be set aside for such talks for the Out-patients.
- She can facilities linkages with local Anganwadi, Public Distribution System and public welfare schemes as may be relevant to the child and the family.

**Nurse:**

- Weight record;
- Measure, mix and dispense feed;
- Give oral drugs;
- Supervise intra venous fluids;
- Assess clinical signs and
- Fill the multichart with all the routine information.
- The nurse will also counsel mothers/caregivers on thee motional needs of her child and encourage them to give sensory stimulation.
- She is also in charge of the structured play therapy.

**Cook cum Care taker:**

- The cook cum care taker will prepare special diet for children as prescribed by the medical officer under the supervision of the Nutrition counselor.
- The cook will also involve mothers and care givers of admitted children in preparation of food.
- Under the supervision of Nutrition counselor, they will make local purchases of food items.
- They can also help cook food for attendants.

**Attendant / Cleaner :**

The cleaners are responsible for managing the cleaning duties.

(ಶ್ರೀ ಪಿ.ಎಸ್. ವಸ್ತ್ರದ್, ಭಾ.ಆ.ಸೇ) 16/7/16
ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳು

(ಡಾ. ರತನ್ ಯು. ಕೇಲ್ಕರ್, ಭಾ.ಆ.ಸೇ)
ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

ಪ್ರತಿಯನ್ನು ಮಾಹಿತಿಗಾಗಿ

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
2. ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ), ಎನ್‌ಹೆಚ್‌ಎಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
5. ಯೋಜನಾ ನಿರ್ದೇಶಕರು, ಆರ್‌ಸಿಹೆಚ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
6. 30 ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಡಿಪಿಎಂಓ, ಆರ್‌ಸಿಹೆಚ್‌ಓ, ಡಿಪಿಎಂ ಇವರಿಗೆ ಮುಂದಿನ ಕ್ರಮಕ್ಕಾಗಿ.
7. 30 ಜಿಲ್ಲೆಯ ಜಿಲ್ಲಾ ಸರ್ಜನ್, ಜಿಲ್ಲಾ ಆಸ್ಪತ್ರೆ ಇವರಿಗೆ ಕ್ರಮಕ್ಕಾಗಿ.
8. ಮುಖ್ಯ ಆರ್ಥಿಕ ಅಧಿಕಾರಿಗಳು, ಎನ್‌ಹೆಚ್‌ಎಂ ರವರಿಗೆ ಮಾಹಿತಿಗಾಗಿ.
9. ಕಛೇರಿ ಪ್ರತಿ